# ಚಿತ್ರದುರ್ಗದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
## ಸ್ಪೆಷಲ್ ಕೇಸ್(ಪಿ.ಸಿ) ಸಂಖ್ಯೆ: 06/2016

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಎಂ.ಸಿ ವಿನಯಕುಮಾರ್ | **ಪಿಡಬ್ಲ್ಯೂ.22** |
| **ತಂದೆಯ ಹೆಸರು** | : | ಚಂದ್ರಪ್ಪ | **ಸಿಡಬ್ಲ್ಯೂ.56** |
| **ವಯಸ್ಸು** | : | **64 ವರ್ಷ** | **ಪ್ರಮಾಣ ವಚನ ಬೋಧಿಸಿದ** |
| **ಉದ್ಯೋಗ** | : | ಸಹಾಯಕ ಕೃಷಿ ನಿರ್ದೇಶಕರು , ಸಹಾಯಕ ಕೃಷಿ ನಿರ್ದೇಶಕರವರ ಕಛೇರಿ, ಹಿರಿಯೂರು . | **ದಿನಾಂಕ: 07.02.2019.** |
| **ವಾಸಸ್ಥಳ** | : | ಹಿರಿಯೂರು . | |

## ಎಸ್‌ಪಿಪಿ ರವರಿಂದ: ಮುಖ್ಯ ವಿಚಾರಣೆ:

ದಿಃ 08.08.2013 ರಿಂದ 2015 ರವರೆಗೆ ನಾನು ಹಿರಿಯೂರಿನ ಸಹಾಯಕ ಕೃಷಿ ನಿರ್ದೇಶಕರವರ ಕಛೇರಿಯಲ್ಲಿ ಸಹಾಯಕ ಕೃಷಿ ನಿರ್ದೇಶಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ . ದಿಃ 11.06.2014 ರಂದು ಲೋಕಾಯುಕ್ತ ಪೊಲೀಸರು ನಮ್ಮ ಕಛೇರಿಗೆ ಪತ್ರ ಬರೆದು ಹೂವಿನಹೊಳೆ ಗ್ರಾಮ ಸರ್ವೆ ನಂ 62/1, 62/2 , ಈಶ್ವರಗೇರಿ ಗ್ರಾಮದ ಸರ್ವೆ ನಂ 126/4 ಜಮೀನಿನಲ್ಲಿ 2002 ರಿಂದ 2014 ಅವಧಿಯಲ್ಲಿ ಕೃಷಿ ಚಟುವಟಿಕೆ ಮಾಡಲು ಖರ್ಚು , ಆದಾಯ ವಿವರ ಕೇಳಿದ್ದರು . ಆ ಪತ್ರವನ್ನು ನಿಪಿ–45 ಅಂತ ಗುರುತಿಸಲಾಯಿತು . ಆ ಪ್ರಕಾರ ನಾನು ನಮ್ಮ ಅಧಿಕಾರಿಗಳಾದ ಮುಸ್ತಾಕ್ ಅಹಮದ್ , ಕೃಷಿ ಅಧಿಕಾರಿಗೆ ಸ್ಥಳ ಪರಿಶೀಲನೆ ಮಾಡಿ , ವರದಿ ಕೊಡಲು ಹೇಳಿದ್ದೆ . ಆ ಪ್ರಕಾರ ಮುಸ್ತಾಕ್ ಅಹಮದ್ ಇವರು ನನಗೆ ವರದಿ ಕೊಟ್ಟಿರುತ್ತಾರೆ (3 ಪುಟದ ಅಂಕಿ ಅಂಶದ ವರದಿ ಇರುತ್ತದೆ) . ಅದನ್ನು ನಿಪಿ–46 ಅಂತ ಗುರುತಿಸಲಾಯಿತು . ಸದರಿ ವರದಿ ಆಧಾರದ ಮೇರೆಗೆ ನಾನು 3 ಜಮೀನುಗಳಲ್ಲಿ ಕೃಷಿ ಚಟುವಟಿಕೆ ಮಾಡಲು ಆದಾಯ , ಖರ್ಚು ವಿವರ ಕೊಟ್ಟಿರುತ್ತೇನೆ . ಅದನ್ನು ನಿಪಿ–47 ಅಂತ ಗುರುತಿಸಲಾಯಿತು .

2. ನಾನು ಪೊಲೀಸರಿಗೆ ಬರೆದಂತಹ ಪತ್ರ ಗುರುತಿಸುತ್ತೇನೆ. ಅದನ್ನು ನಿಪಿ–48 ಅಂತ ಗುರುತಿಸಲಾಯಿತು . ನಮ್ಮ ವರದಿ ಪ್ರಕಾರ ಸರ್ವೆ ನಂ 62/1 ರಲ್ಲಿ ನಾಗಮ್ಮ ಕೋಂ ದ್ಯಾವಣ್ಣ ಹೆಸರಿನಲ್ಲಿದ್ದು , ಸರ್ವೆ ನಂ 62/2 ಇದು ಡಿ.ರಾಮಣ್ಣ ಮತ್ತು ಆರೋಪಿ ರಾಜಣ್ಣನ ಹೆಸರಿನಲ್ಲಿದೆ . ಸರ್ವೆ ನಂ 62/2 ಕ್ಷೇತ್ರ 4 ಎಕರೆ 22 ಗುಂಟೆ ದ್ಯಾಮಣ್ಣ , ಆರೋಪಿ ರಾಜಣ್ಣ ಇವರ ಹೆಸರಿನಲ್ಲಿ ಜಂಟಿಯಾಗಿದೆ . 2011 , 2012, 2013, 2014 ಅವಧಿಯಲ್ಲಿ ಆರೋಪಿ ರಾಜಣ್ಣ ಜಮೀನಿನಲ್ಲಿ ಯಾವುದೇ ಬೆಳೆ ಹಾಕಿರಲಿಲ್ಲ . ಹೀಗಾಗಿ ಆರೋಪಿಗೆ ಆ 2 ಜಮೀನುಗಳಿಂದ ಯಾವುದೇ ಆದಾಯ ಬಂದಿರುವುದಿಲ್ಲ . ತದನಂತರ ನಾನು ಕೂಡ 3 ಜಮೀನುಗಳ ಹತ್ತಿರ ಹೋಗಿ ಪರಿಶೀಲಿಸಿ ಬಂದಿದ್ದೇನೆ . ವಾಸ್ತವಾಂಶ ನಿಜ ಇರುತ್ತದೆ .

**<u>ಆರೋಪಿತರ ಪರ ಶ್ರೀ ಎಸ್.ಪಿ.ಹೆಚ್. ವಕೀಲರಿಂದಃ ಪಾಟೀ ಸವಾಲುಃ</u>**

3. ಮುಸ್ತಾಕ್ ಅಹಮದ್ ವರದಿ ಕೊಡುವುದಕ್ಕಿಂತ ಪೂರ್ವದಲ್ಲಿ ನಾನು ಜಮೀನುಗಳ ಹತ್ತಿರ ಹೋಗಿರುವುದಿಲ್ಲ . ನಾನು ವರದಿ ಕೊಡುವ ಸಮಯದಲ್ಲಿ ತಹಸಿಲ್ದಾರ್ ಇವರಿಂದ ಪಹಣಿ ಪಡೆದಿದ್ದೇನೆ , ಸ್ಥಳಕ್ಕೆ ಭೇಟಿ ಕೊಟ್ಟಿದ್ದೇನೆ . ಅಂಕಿ ಸಂಖ್ಯೆ ಪಡೆಯಲು ಜಿಲ್ಲಾ ಅಂಕಿ ಸಂಖ್ಯೆ ಕಛೇರಿಯಿಂದ ಮಾಹಿತಿ ಪಡೆದಿದ್ದೇನೆ . ಎ.ಪಿ.ಎಂ.ಸಿ. ಕಛೇರಿಯಿಂದ ದರದ ಪಟ್ಟಿ ಪಡೆದಿದ್ದೇನೆ . ಎ.ಪಿ.ಎಂ.ಸಿ. ಕಛೇರಿಯಿಂದ ಪಡೆದ ದರದ ಪಟ್ಟಿ, ಅಂಕಿ ಸಂಖ್ಯೆ ಇಲಾಖೆಯಿಂದ ಪಡೆದ ಮಾಹಿತಿ ವಿವರವನ್ನು ನಾನು ಈ ಕೇಸಿನಲ್ಲಿ ಹಾಜರು ಮಾಡಿಲ್ಲ . ಸರ್ವೆ ನಂ 62/1, 62/2 ಜಮೀನಿಗೆ ಭೇಟಿ ಕೊಡುವ ಸಮಯದಲ್ಲಿ ನಾನು ಆರೋಪಿಗೆ , ಅವರ ಸಹೋದರರಿಗೆ ಲಿಖಿತ ನೋಟೀಸ್ ಕೊಟ್ಟಿರಲಿಲ್ಲ . ಆದರೆ ಬಾಯಿ ಮಾತಿನಲ್ಲಿ ಹೇಳಿದ್ದೆ. ಅಂದು ನಾನು ಸ್ಥಳಕ್ಕೆ ಹೋದಾಗ ಪಂಚರ ಸಮಕ್ಷಮ ಮಹಜರ್ ಮಾಡಿರುವುದಿಲ್ಲ . ಅದೇ ರೀತಿ ಮುಸ್ತಾಕ್ ಅಹಮದ್ ಕೂಡ ಮಹಜರ್ ಮಾಡಿರುವುದಿಲ್ಲ . 2002 ರಿಂದ

2014 ಅವಧಿಯಲ್ಲಿ ಆರೋಪಿ ತನ್ನ ಜಮೀನಿನಲ್ಲಿ ಸಾಕಷ್ಟು ಚೆನ್ನಾಗಿ ಬೆಳೆ ಬೆಳೆದಿದ್ದಾನೆ ಎನ್ನುವುದು ಸುಳ್ಳು . ಲೋಕಾಯುಕ್ತ ಪೊಲೀಸರು ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ನೋಡಿದ ಜಮೀನು ಪಹಣಿಯಲ್ಲಿ ಆರೋಪಿ ಬೆಳೆ ಬೆಳೆದ ಬಗ್ಗೆ ಬೆಳೆ ವಿವರ ಇದೆ .

4. ಆರೋಪಿಗೆ ಸೇರಿದ ಜಮೀನುಗಳಲ್ಲಿ ಪ್ರತಿ ವರ್ಷ ಬೆಳೆ ಬೆಳೆಯುತ್ತಾ ಬಂದಿರುತ್ತಾನೆ ಅಂತ ಕೇಳಿದ ಪ್ರಶ್ನೆಗೆ ಸಾಕ್ಷಿ ಹೇಳುತ್ತಾರೆ 2013–14 ರಲ್ಲಿ ಬೆಳ ಬೆಳೆದ ಬಗ್ಗೆ ನನಗೆ ಮಾಹಿತಿ ಇಲ್ಲ . ಅದಕ್ಕಿಂತ ಪೂರ್ವದಲ್ಲಿ 2002 ರಿಂದ 2012 ರವರೆಗೆ ಬೆಳೆ ಬೆಳೆದ ಬಗ್ಗೆ ಪಹಣಿಯಲ್ಲಿ ಮಾಹಿತಿ ಇದೆ . ನಾನು ಮತ್ತು ಮುಸ್ತಕ್ ಅಹಮದ್ ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ ಎನ್ನುವುದು ಸುಳ್ಳು . ನಾನು ಸಂಗ್ರಹಿಸಿದ ದಾಖಲೆ ಅಂದರೆ ಎ.ಪಿ.ಎಂ.ಸಿ , ಅಂಕಿ ಅಂಶ ದಾಖಲೆ , ಪ್ಯಾಕೇಜ್ ಪ್ರಾಕ್ಟೀಸ್ ಪದ್ದತಿ ದಾಖಲೆಗಳನ್ನು ನಾನು ಕೋರ್ಟಿಗೆ ಕೊಟ್ಟಿಲ್ಲ ಎನ್ನುವುದು ನಿಜ . ಪ್ಯಾಕೇಜ್ ಪ್ರಾಕ್ಟೀಸ್ ಪದ್ದತಿ ಪ್ರಕಾರ ರೈತ ಬೆಳೆ ಬೆಳೆದರೆ ಒಳ್ಳೆಯ ಬೆಳೆ ಬರುತ್ತದೆ ಎನ್ನುವುದು ನಿಜ . ಲೋಕಾಯುಕ್ತ ಪೊಲೀಸರ ಮಾತು ಕೇಳಿ ಕಡಿಮೆ ಆದಾಯ ತೋರಿಸಿದ್ದೇನೆ ಎನ್ನುವುದು ಸುಳ್ಳು .

ಮರು ವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಎಸ್.ಬಿ. ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.